**ಸಾಕ್ಷಿಯನ್ನು ದಿಃ 03-07-2024 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವಕೀಲರಿಂದ.**

ನನ್ನ ತಂದೆಯ ಹೆಸರು ಮರಿ ಹುಚ್ಚಯ್ಯ. ಸಂಪಿಗೇಗೌಡ ನಮ್ಮ ವಂಶದ ಮೂಲ ಪುರುಷ. ಸಂಪಿಗೇಗೌಡನಿಗೆ ಹುಚ್ಚೇಗೌಡ, ಕರೀಗೌಡ, ಸಾದು ಪುಟ್ಟಪ್ಪ ಎಂಬ ಸಹೋದರರು ಇದ್ದರು. ಮರಿಹುಚ್ಚಯ್ಯ ಚೌಡೇಗೌಡನರ ಮಗ. ಚೌಡಯ್ಯ ಬಿನ್ ಹುಚ್ಚೇಗೌಡ ಯಾರು ಎಂದರೆ ನನಗೆ ಗೊತ್ತಿಲ್ಲ.ಸಂಪಿಗೆ ಗೌಡನಿಗೆ ಮೂರು ಜನ ಮಕ್ಕಳು ಇದ್ದರು.ನಾನು ದ್ವಿತೀಯ ಪಿ ಯುಸಿ ಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಮ್ಮ ತಾತನ ಹೆಸರು ಚೌಡಯ್ಯ ಬಿನ್ ಹುಚ್ಚೇಗೌಡ ಎಂದರೆ ಸರಿಯಲ್ಲ.ಸಂಪಿಗೇಗೌಡ ಮರಿಹುಚ್ಚೇಗೌಡನ ತಾತ ಅಲ್ಲ ಎಂದರೆ ಸರಿಯಲ್ಲ. ನಾವು ತರಿಸಿದ ವಂಶವೃಕ್ಷ ಕಾನೂನು ಬದ್ದವಾಗಿಲ್ಲ ಎಂದರೆ ಸರಿಯಲ್ಲ.

ಗ್ರಾಮಲೆಕ್ಕಾಧಿಕಾರಿಯವರು ಸಲ್ಲಿಸಿದ ಮಹಜರ್ನಲ್ಲಿ ನಮ್ಮ ತಂದೆಯ ತಾತನ ಹೆಸರು ಸಂಪಿಗೇಗೌಡ ಎಂದು ತಪ್ಪಾಗಿ ನಮೂದಿಸಲಾಗಿದೆ ಬರೆಯಲಾಗಿದೆ ಎಂದರೆ ಸರಿಯಲ್ಲ. ಸದರಿ ಮಹಜರ್ ನಲ್ಲಿ ನಮ್ಮ ಊರಿನ ಗ್ರಾಮಸ್ಥರು ನಮ್ಮ ತಂದೆಯ ಹೆಸರನ್ನು ಚೌಡಯ್ಯ ಬಿನ್ ಹುಚ್ಚೇಗೌಡ ಎಂದು ಹೇಳಿ ಬರೆಸಿರುತ್ತಾರೆ ಎಂದರೆ ಸರಿಯಲ್ಲ. ಗ್ರಾಮಲೆಕ್ಕಾಧಿಕಾರಿಯವರು ಸರ್ಕಾರಕ್ಕೆ ಸಲಿಸಿದವರದಿಯಲ್ಲಿ ನಮ್ಮ ತಂದೆಯ ತಾತನ ಹೆಸರು ಚೌಡಯ್ಯ ಬಿನ್ ಹುಚ್ಚೇಗೌಡ ಎಂದು ವರದಿಸಲ್ಲಿಸಿರುತ್ತಾರೆ ಎಂದರೆಸರಿಯಲ್ಲ. ವಾದಿಯ ತಾತನ ಹೆಸರು ಸಂಪಿಗೆ ಗೌಡ ಎಂದರೆ ಸಾಕ್ಷಿಯು ಅಲ್ಲ ಎಂದುನುಡಿಯುತ್ತಾರೆ. ಸಂಪಿಗೆಗೌಡ ರವರಿಗೆ ಸಾದುಪುಟ್ಟಪ್ಪಗೌಡ ಎಂಬಎರಡು ಹೆಸರು ಇವೆ ಎಂದರೆ ಸರಿಯಲ್ಲ. ನಮ್ಮ ತಾತ ಚೌಡೇಗೌಡ ಬಿನ್ ಹುಚ್ಚೇಗೌಡ ರವರು 1999 ರಲ್ಲಿ ಮರಣ ಹೊಂದಿದ್ದು ಅವರೇ ನಮ್ಮ ತಾತಎಂದರೆ ಸರಿಯಲ್ಲ.

ಮುಂದುವರಿದ ಪಾಟೀಸವಾಲಿಗೆ ವಕೀಲರು ಸಮಯ ಕೋರಿದ್ದು ಸಮಯನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓ.ಹೇ.ಕೇ. ಸರಿ ಇದೆ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ
ಕುಣಿಗಲ್.